# ಉಡುಪುಗಳ ರಾಣಿ ಲೆಹೆಂಗಾ



**'ಲೆಹೆಂಗಾ...' ಸದ್ಯ ಫ್ಯಾಷನ್ ಲೋಕದಲ್ಲಿ ದಿನಕ್ಕೊಂದು ರೂಪು ಪಡೆಯುತ್ತ, ದೇಸಿತನ, ಸಂಪ್ರದಾಯವನ್ನು ಕಾಪಿಟ್ಟುಕೊಂಡು 'ರಾಣಿ'ಯಾಗಿ ಮೆರೆಯುತ್ತಿರುವ ಉಡುಪಿದು. ಭಾರತೀಯ ಸಾಂಪ್ರದಾಯಿಕ ಉಡುಪುಗಳಲ್ಲಿ ಲೆಹೆಂಗಾ, ಸೀರೆಗೆ ಅಗ್ರಪಟ್ಟ. ಈ ಪಟ್ಟ ಕಸಿದುಕೊಳ್ಳಲು ಇನ್ನಾವ ಉಡುಪಿಗೂ ಸಾಧ್ಯವಾಗಿಲ್ಲ ಎಂದರೆ ಅತಿಶಯೋಕ್ತಿ ಆಗಲಾರದು.**

**■ ಸುಮಾ ಬಿ.**

ಮದುವೆ ಎಂದರೆ ಮದುಮಗಳ ಮೊದಲ ಮತ್ತು ನೆಚ್ಚಿನ ಆಯ್ಕೆ ಲೆಹೆಂಗಾವೇ ಆಗಿರುತ್ತದೆ. ಮದುಮಗಳಿಗೆ ಶ್ರೀಮಂತ ನೋಟ ತಂದುಕೊಡುವ ಇದು ಎಲ್ಲ ಕಾಲಕ್ಕೂ ಸಲ್ಲುತ್ತದೆ. ಮದುಮಗಳಿಗೆ ಮಾತ್ರವಲ್ಲ; ಸಾಂಪ್ರದಾಯಿಕ ಸಮಾರಂಭಗಳಲ್ಲಿ ಭಾಗವಹಿಸುವ ಎಲ್ಲ ಲಲನೆಯರ ಪ್ರೀತಿಯ ಆಯ್ಕೆ ಲೆಹೆಂಗಾವೇ. ಹಬ್ಬ, ಸಣ್ಣ ಪುಟ್ಟ ಸಮಾರಂಭಗಳು, ಪೂಜೆ, ಜಾತ್ರೆ, ಜನ್ಮ ದಿನಾಚರಣೆ, ಕಿಟ್ಟಿ ಪಾರ್ಟಿ, ಅಣ್ಣನ ಮದುವೆ, ಸ್ನೇಹಿತೆಯ ಮದುವೆ, ಕಚೇರಿಯಲ್ಲಿ ಹಬ್ಬಗಳ ಆಚರಣೆ... ಹೀಗೆ ಬಹು ವಿಧದ ಸಮಾರಂಭಗಳಿಗೆ ಹೆಣ್ಣುಮಕ್ಕಳು ಲೆಹೆಂಗಾವನ್ನೇ ಅಪ್ಪಿಕೊಳ್ಳುತ್ತಾರೆ.

ಲೆಹೆಂಗಾ ರಾಜಸ್ಥಾನ ಹಾಗೂ ಗುಜರಾತ್ ರಾಜ್ಯಗಳ ಸಾಂಪ್ರದಾಯಿಕ ಉಡುಪು. ಶತಮಾನಗಳ ಹಿಂದಿನಿಂದಲೂ ಅಲ್ಲಿನ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳನ್ನು ಈ ಉಡುಪು ಅಲಂಕರಿಸಿದೆ. ಕರುನಾಡಲ್ಲಿ ಯುವತಿಯರ ಸಾಂಪ್ರದಾಯಿಕ ಉಡುಪಾಗಿದ್ದ ಲಂಗ– ದಾವಣಿಯನ್ನು ಈಗ ಲೆಹೆಂಗಾ ಆಕ್ರಮಿಸಿದೆ. ಕರುನಾಡಿಗೆ ಹತ್ತಿಪ್ಪತ್ತು ವರ್ಷಗಳ ಈಚೆಗೆ 'ಲೆಹೆಂಗಾ' ಅಡಿ ಇಟ್ಟಿದೆಯಾದರೂ ಬಹುಬೇಗ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಲಲನೆಯರನ್ನು ಆಕರ್ಷಿಸಿದೆ. ಈಗ ಇದು ವಿಶ್ವವೇ ಮೆಚ್ಚಿಕೊಂಡಿರುವ, ಇಷ್ಟಪಡುವ ಉಡುಪಾಗಿ ಹೊರಹೊಮ್ಮಿದೆ.

'ಸಾಂಪ್ರದಾಯಿಕ ಮತ್ತು ಟ್ರೆಂಡಿ ಲುಕ್ ನೀಡುವ ಲೆಹೆಂಗಾಗಳ ವಿನ್ಯಾಸ ಬದಲಾಗುತ್ತಲೇ ಇರುತ್ತದೆ. ಜರ್ದೋಸಿ, ಸೂಕ್ಷ್ಮ ಎಂಬ್ರಾಯಿಡರಿ, ಮಿರರ್ ವರ್ಕ್, ರೆಟ್ರೊ, ರೇಷ್ಮೆ ಹೀಗೆ ನಾನಾ ವಿಧದಲ್ಲಿ ರೂಪು ತಳೆಯುತ್ತ ತನ್ನ ಅಸ್ಮಿತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಅಂಬ್ರೆಲಾ ಕಟ್, ಫಿಶ್‌ಕಟ್, ಕಲಿಕಟ್ ವಿನ್ಯಾಸಗಳು ಹೆಚ್ಚು ಟ್ರೆಂಡಿ ಲುಕ್ ನೀಡುತ್ತವೆ. ಮದುಮಗಳ ಉಡುಪು ಎಂದರೆ ಅದಕ್ಕೆ ಅದ್ದೂರಿತನ ಹೆಚ್ಚೇ ಇರುತ್ತದೆ. ವೆಲ್ವೆಟ್, ನೆಟ್ಟೆಡ್ ಬಟ್ಟೆಗಳಿಗೆ ಸ್ಟೋನ್ ವರ್ಕ್, ಕುಂದನ್ ವರ್ಕ್, ಮಿರರ್ ವರ್ಕ್‌ಗಳು ಲೆಹೆಂಗಾವನ್ನು ಶ್ರೀಮಂತಗೊಳಿಸುತ್ತವೆ' ಎನ್ನುತ್ತಾರೆ ದಾವಣಗೆರೆಯ ವಸ್ತ್ರ ವಿನ್ಯಾಸಕಿ ಸುಪ್ರಿಯಾ ವಿನೋದ್ ಪುಕಾಳೆ.

### ಲೆಹೆಂಗಾ ಆಫ್ ಸ್ಯಾರಿ

ಸದ್ಯ ಲೆಹೆಂಗಾದಲ್ಲೇ ಟ್ರೆಂಡ್ ಆಗಿರುವ ವಿನ್ಯಾಸವಿದು. ರೇಷ್ಮೆ ಸೀರೆಯನ್ನು